ಶ್ರೀ ಸಿ. ಬೈರೇಗೌಡ : ಬೇಡಿಕೆಯೇ ಇಲ್ಲದಿದ್ದರೆ ನಾವು ಆದನ್ನು ಆಲೋಚನೆ ಮಾಡಬಹುದಿತ್ತು. ಈಗ ಸಾಕಷ್ಟು ಬೇಡಿಕೆ ಇದೆ. ಮಾನ್ಯ ಶಿವಪ್ಪನವರು ಕ್ಷೇತ್ರದಲ್ಲಿ 50 ಕೊಡಿ ಎಂದು ಕೇಳುತ್ತಾರೆ. 30 ಹೆಚ್.ಪಿ.ಗಿಂತ ಹೆಚ್ಚು ಕೊಡಬೇಕೆಂಬ ಬಗ್ಗೆ ವೈಯಕ್ತಿಕವಾಗಿ ಮತ್ತು ಸರಕಾರಕ್ಕೆ ಇಚ್ಛೆ ಕೂಡ ಇಲ್ಲ.

ಅಂಗನವಾಡಿ ಮಕ್ಕಳಿಗೆ ಆಹಾರ ಪೂರೈಕೆ

299 - ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಮಕ್ಕಳಿಗೆ ಸರಿಯಾಗಿ ಆಹಾರ ಒದಗಿಸದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕಾರಣಗಳೇನು?

ಆ) ಇದರಿಂದಾಗಿ ಸರ್ಕಾರದ ಉದ್ದೇಶವೇ ವಿಫಲ ವಾಗುವುದಿಲ್ಲವೇ?

ಇ) ಇದನ್ನು ಸರಿಪಡಿಸಲು ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, ರಾಜ್ಯದ ಅಂಗನವಾಡಿ ಮಕ್ಕಳಿಗೆ ಆಹಾರವನ್ನು ಒದಗಿಸುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ನನಗೆ ತಿಳಿದಿರುವಂತೆ ಅಂಗನವಾಡಿ ಕೇಂದ್ರಗಳಿಗೆ ಆಹಾರವನ್ನು ಸರಿಯಾಗಿ ಒದಗಿಸುತ್ತಿಲ್ಲ. ಆದರೆ ಈ ವಿಚಾರ ನನ್ನ ಗಮನಕ್ಕೆ ಬಂದಿಲ್ಲವೆಂದು ಸಚಿವರು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಇದರ ಬಗ್ಗೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ದೂರು ಬರುತ್ತಿದೆ. ಸುಮಾರು 3-4 ತಿಂಗಳುಗಳಿಂದ ಪೌಷ್ಟಿಕ ಆಹಾರವನ್ನು ಬಿಡುಗಡೆ ಮಾಡುತ್ತಿಲ್ಲ. ಅಂಗನವಾಡಿ ಕೇಂದ್ರಗಳಿಗೆ ಅಕ್ಕಿ, ಸೋಯಾ ರವೆ, ಪೌಷ್ಟಿಕ ಆಹಾರ ಈ ಮೂರು ರೀತಿಯ ಪೌಷ್ಟಿಕ ಆಹಾರವನ್ನು ಒದಗಿಸುತ್ತಾರೆಂದು ನನಗೆ ತಿಳಿದಿದೆ. ಕೆಲವು ಕಡೆಗಳಲ್ಲಿ ಕೇವಲ ಅಕ್ಕಿಯನ್ನು, ಮತ್ತೆ ಕೆಲವು ಕಡೆಗಳಲ್ಲಿ ಪೌಷ್ಟಿಕ ಆಹಾರವನ್ನು ಮಾತ್ರ ಒದಗಿಸುತ್ತಿದ್ದಾರೆ. ಕೆಲವು ಅಂಗನವಾಡಿ ಕೇಂದ್ರಗಳಿಗೆ ಯಾವುದನ್ನೂ ಒದಗಿಸುತ್ತಿಲ್ಲ. ಈ ರೀತಿ ಸರಿಯಾದ ಹೊಂದಾಣಿಕೆ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. ಇದರಿಂದಾಗಿ ಅಂಗನವಾಡಿ ಕೆಂದ್ರಗಳಿಗೆ ಬರುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ನಾವು ಮಕ್ಕಳನ್ನು ದೇವರಿಗೆ ಸಮಾನವೆಂದು ಹೇಳುತ್ತೇವೆ. ಅಂಗನವಾಡಿ ಕೇಂದ್ರದ ಮುಖ್ಯವಾದ ಉದ್ದೇಶವೆಂದರೆ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಮಾಡುವುದಾಗಿದೆ. ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಕೊಡದಿದ್ದಾಗ ಅವರ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯಾಗಲು

ಸಾಧ್ಯವಾಗುವುದಿಲ್ಲ. ಇದರಿಂದಾಗಿ ನಮ್ಮ ಉದ್ದೇಶ ಸಂಪೂರ್ಣವಾಗಿ ವಿಫಲವಾಗುತ್ತದೆ. ಆದ್ದರಿಂದ ಈ ಪೌಷ್ಟಿಕ ಆಹಾರವೇನಿದೆ ಅದನ್ನು ಕ್ರಮಬದ್ಧವಾಗಿ ಅಂಗನವಾಡಿ ಕೇಂದ್ರಗಳಿಗೆ ಒದಿಗಿಸಬೇಕು. ಅಂಗನವಾಡಿ ಕೇಂದ್ರಗಳಿಗೆ ಸರಿಯಾದ ರೀತಿಯಲ್ಲಿ ಪೌಷ್ಟಿಕ ಆಹಾರವನ್ನು ಒದಗಿಸದಿರುವ ಅಧಿಕಾರಿಗಳ ಮೇಲೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀಮತಿ ವಿಮಲಾಬಾಯಿ ಜಿ. ದೇಶ್‌ಮುಖ್ : ಸನ್ಮಾನ್ಯ ಅಧ್ಯಕ್ಷರೆ, ಆಗ್ರೋ ಕಾರ್ನ್‌ನಲ್ಲಿ ಸ್ವಲ್ಪ ವ್ಯತ್ಯಯ ಉಂಟಾಗಿದ್ದರಿಂದ ನಾವು ಪೌಷ್ಟಿಕ ಆಹಾರವನ್ನು ಕೊಡುವಲ್ಲಿ ಅಶಕ್ತರಾಗಿದ್ದೇವೆ. ಆದಕಾರಣ ಅದಕ್ಕೆ ಬದಲಾಗಿ ಅಕ್ಕಿಯನ್ನು ಕೊಟ್ಟಿದ್ದೇವೆ. ಈಗಾಗಲೆ ಆಗ್ರೋ ಕಾರ್ನ್ ಜೊತೆ ಕೃಷಿ ಸಚಿವರು ಮತ್ತು ಆಹಾರ ಸಚಿವರು ಇದರ ಬಗ್ಗೆ ಸಮಾಲೋಚನೆ ಮಾಡಿದ್ದಾರೆ. ಒಂದೆರಡು ತಿಂಗಳಿನಲ್ಲಿ ಪೌಷ್ಟಿಕ ಆಹಾರವನ್ನು ಸರಬರಾಜು ಮಾಡುವಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಫೆಬ್ರವರಿ ತಿಂಗಳಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಆಹಾರದ ತೊಂದರೆಯಾಯಿತು. ಏಪ್ರಿಲ್, ಮೇ ತಿಂಗಳಿನಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಆಹಾರವನ್ನು ಒದಗಿಸಿರಲಿಲ್ಲ. ಇದರ ಬಗ್ಗೆ ನಾನೇ ದೂರವಾಣಿಯಲ್ಲಿ ನಿರ್ದೇಶಕರ ಜೊತೆಯಲ್ಲಿ ಮಾತನಾಡಿದ್ದೆ. ಆಗ ನಿರ್ದೇಶಕರು ತುಮಕೂರು ಜಿಲ್ಲಾ ಪಂಚಾಯಿತಿಗೆ ದೂರವಾಣಿ ಮಾಡಿ ಆಹಾರ ಒದಗಿಸುವಲ್ಲಿ ತೊಂದರೆ ಆಗಿತ್ತು ಎಂದು ತಿಳಿಸಿದ್ದರು. ಈಗ ಉತ್ತರವನ್ನು ಕೊಡಬೇಕಾದರೆ ಇದು ಇಲಾಖೆಯ ಗಮನಕ್ಕೆ ಬಂದಿಲ್ಲವೆಂದು ತಿಳಿಸಿರುತ್ತಾರೆ. ಈ ರೀತಿಯಾದರೆ ತಮ್ಮ ಇಲಾಖೆ ಕೆಲಸ ನಿರ್ವಹಿಸುತ್ತಿದೆಯೇ, ಇಲ್ಲವೋ? ಈ ಇಲಾಖೆಯಲ್ಲಿ ಒಳ್ಳೆಯ ಸಚಿವರನ್ನು ಇಟ್ಟುಕೊಂಡು ಅವರು ಎಲ್ಲದಕ್ಕೂ ಸಹಿ ಮಾಡುತ್ತಾರೆಂದು, ಈ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲವೆಂದು ಶಾಸಕರ ಪ್ರಶ್ನೆಗೆ ಉತ್ತರ ಕೊಟ್ಟರೆ ಶಾಸಕರಾಗಿ ನಾವು ಇಲ್ಲಿ ಕೆಲಸ ಮಾಡಲು ಆಗುವುದಿಲ್ಲ. ಆ ಇಲಾಖೆಯ ನಿರ್ದೇಶಕರನ್ನು ಕರೆಸಿ ಶಾಸಕರುಗಳಾದ ನಾವು ಅವರೊಂದಿಗೆ ಇದರ ಬಗ್ಗೆ ಮಾತನಾಡಿದ್ದೇವೆಯೋ, ಇಲ್ಲವೋ ಎಂಬ ಬಗ್ಗೆ ಕೇಳಬೇಕಾಗುತ್ತದೆ. ಎನ್.ಸಿ.ಸಿ.ಎಫ್, ಜೊತೆಗೆ ಇವರು ನೆಗೋಶಿಯೇಟ್ ಮಾಡಲಾರದೆಯೇ ತುಮಕೂರಿನ ಚಿಕ್ಕನಾಯಕನ ಹಳ್ಳಿಯಲ್ಲಿ ಒಂದು ತಿಂಗಳು ಆಹಾರವನ್ನು ಒದಗಿಸಿರಲಿಲ್ಲ. ಕೆ.ಸಿ.ಸಿ.ಎಫ್.ನವರು ಇವರು ಅಲ್ಲಿ ಮೊದಲು ಸಪ್ಲೈ ಮಾಡುತ್ತಿದ್ದವರ ಜೊತೆ ಚರ್ಚೆಮಾಡಿ...

ಅಧ್ಯಕ್ಷರು : ಮಾಧುಸ್ವಾಮಿಯವರೆ, ತಾವು ಹಿರಿಯ ಸದಸ್ಯರು, ಬಂದ ಪತ್ರಗಳಿಗೆಲ್ಲ ಸಹಿಯನ್ನು ಹಾಕುವ ಸಚಿವರು ಅವರಲ್ಲಿ. ಸಚಿವರು ನೋಡಲು ಮೃದುವಾಗಿದ್ದರೂ ಸಹ ದೃಢವಾಗಿರುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೆ, ನಾವು ಇದರ ಬಗ್ಗೆ ಕಾಗದ ಬರೆದಿದ್ದೇವೆ. ನಿರ್ದೇಶಕರಿಗೆ ದೂರವಾಣಿಯನ್ನು ಮಾಡಿದ್ದೇವೆ. ದಯವಿಟ್ಟು ಇದರ ಬಗ್ಗೆ ಅವರನ್ನು...

ಅಧ್ಯಕ್ಷರು : ದಯಮಾಡಿ ನನ್ನ ಮಾತನನ್ನು ಕೇಳಿ, Listen to me. For a Question of General nature like this ಅವರು ಇಲ್ಲವೆಂದು ಹೇಳಿದ್ದಾರೆ. ಸ್ಪೆಸಿಫಿಕ್ ಆಗಿ ತುಮಕೂರಿನ ಬಗ್ಗೆ ದೂರು ಕೊಟ್ಟರೆ ಅವರು ಸರಿಯಾಗಿ ಉತ್ತರವನ್ನು ಕೊಡುತ್ತಿದ್ದರು.

ಶ್ರೀ ಜೆ.ಸಿ. ಮಾಧುಸ್ವಾಮಿ : ರಾಜ್ಯದಲ್ಲಿನ ಅಂಗನವಾಡಿಗಳಿಗೆ ಆಹಾರ ಒದಗಿಸಿಲ್ಲದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆಯನ್ನು ಕೇಳಿರುವುದಕ್ಕೆ ಅವರು ಇಲ್ಲವೆಂದು ಉತ್ತರವನ್ನು ಕೊಟ್ಟರೆ, ಇದರ ಬಗ್ಗೆ ಮಾತನಾಡಿರುವ ಶಾಸಕರ ಸ್ಥಿತಿ ಏನಾಗಬೇಕು? ಇದು ಸಚಿವರ ಗಮನಕ್ಕೆ ಬಂದಿಲ್ಲವೆಂದರೆ ನಾವು ಶಾಸಕರಾಗಿ ಸರ್ಕಾರದ ಗಮನಕ್ಕೆ ತರದೆ ಮತ್ತೆ ಯಾರ ಗಮನಕ್ಕೆ ತರಬೇಕು? ಇದು ನಿರ್ದೇಶಕರ ಗಮನಕ್ಕೆ ಬಂದಿತ್ತೋ ಇಲ್ಲವೋ ಎಂಬುದು ನಮಗೆ ಬೇಕು.

ಅಧ್ಯಕ್ಷರು : ಪ್ರಶ್ನೆ ಹೇಗೆ ಇರುತ್ತದೆ ಎನ್ನುವುದರ ಮೇಲೆ ಉತ್ತರ ಬರುತ್ತದೆ. ಒಂದು ಜನರಲ್ ನೇಚರ್‌ದಲ್ಲಿ ಪ್ರಶ್ನೆ ಕಳಿಸಿದಾಗ ಆಗಿರಬಹುದು. ರಾಜ್ಯದಲ್ಲಿ ಅಲ್ಲೊಂದು ಕಡೆ ಇಲ್ಲೊಂದು ಕಡೆ ಆಗಿರುತ್ತದೆ. ರಾಜ್ಯದಲ್ಲಿರುವ ಸರ್ಕಾರಿ ಬಸ್ಸುಗಳು ಕೆಟ್ಟು ಹೋಗಿವೆ ಎನ್ನುವುದರ ಬಗ್ಗೆ ತಮ್ಮ ಗಮನಕ್ಕೆ ಬಂದಿದೆಯಾ ಎಂದು ಕೇಳಿದರೆ ಇಲ್ಲಾ ಎಂದು ಹೇಳುತ್ತಾರೆ. ಯಾವುದೇ ಒಂದು ಬಸ್ಸು ನಿಮ್ಮ ಊರ ಹತ್ತಿರ ಕೆಟ್ಟು ಹೋಗಿರಬಹುದು. ಸ್ಪೆಸಿಫಿಕ್ ಆಗಿ ಉತ್ತರ ಇರುತ್ತದೆ. ಜನರಲ್ ಆಗಿ ಪ್ರಶ್ನೆ ಇದ್ದರೆ ಜನರಲ್ ಆಗಿ ಉತ್ತರ ಇರುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಂಗನವಾಡಿ ಮಕ್ಕಳಿಗೆ ಮೇಜರ್ ಕಾರ್ಯಕ್ರಮ ಎಂದರೆ ಪೂರಕ ಪೌಷ್ಠಿಕ ಆಹಾರ. ಒಂದು ತಿಂಗಳು ಸಪ್ಲೈ ಆಗಿಲ್ಲ, ನಾನು ನಿರ್ದೇಶಕರಿಗೆ ದೂರವಾಣಿ ಮಾಡಿ ಮಾತನಾಡಿದೆ. ತುಮಕೂರ ಜಿಲ್ಲಾ ಪಂಚಾಯಿತದಿಂದ ರೆಝುಲ್ಯುಶನ್ ಮಾಡಿ ಕಳುಹಿಸಿದ್ದೇವೆ. ಫುಡ್ ಗ್ರೇನ್ಸ್ ಸಪ್ಲೈ ಆಗುತ್ತಿಲ್ಲವೆಂದು, ಬರೀ ರೈಸ್ ಕೊಡುತ್ತಾರೆಂದು ಹೇಳಿದ್ದೇವೆ. ಇದು ಗಮನಕ್ಕೆ ಬಂದಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಕೆಲವು ಕಡೆ ಸಮಸ್ಯೆಯಾಗಿದೆ ಎಂದು ಅವರು ತಮ್ಮ ಉತ್ತರದಲ್ಲಿ ಹೇಳಿದರು. Let me hear the Minister.

ಶ್ರೀಮತಿ ವಿಮಲಾಬಾಯಿ ಜೆ. ದೇಶ್‌ಮುಖ್ : ಜಿಲ್ಲಾ ಪಂಚಾಯಿತಿಯವರು ನಮಗೆ ತಿಳಿಸಿದರೆ ಇದರ ಬಗ್ಗೆ ಕ್ರಮ ತೆಗೆದುಕೊಂಡು ಸರಬರಾಜು ಮಾಡಲಾಗುತ್ತದೆಂದು ನಾನು ಹೇಳುತ್ತೇನೆ. ಜಿಲ್ಲಾ ಪಂಚಾಯಿತಿಯವರು ಸರಿಯಾಗಿ ಆಹಾರಧಾನ್ಯ ಸರಬರಾಜು ಆಗಿದೆಯೋ ಇಲ್ಲವೋ ಎಂಬುದನ್ನು ಅವರು ನಮ್ಮ ಗಮನಕ್ಕೆ ತರಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾರ್ಚ್ ತಿಂಗಳಿನಲ್ಲಿ ಅವರ ನಿರ್ದೇಶಕರು ಬಿಲ್‌ಗಳನ್ನು ಏಕೆ ಪೆಂಡಿಂಗ್ ಇಟ್ಟುಕೊಂಡರು ಎನ್ನುವುದನ್ನು ಈ ಸಭೆಯ ಮುಂದೆ ಹೇಳಬೇಕು. ಅವರು 22 ಲಕ್ಷ ರೂಪಾಯಿಗಳ ಪೇಮೆಂಟ್‌ನ್ನು ಪೆಂಡಿಂಗ್‌ನಲ್ಲಿ ಇಟ್ಟಿದ್ದರು.

ಅಧ್ಯಕ್ಷರು : ನೋಟೀಸ್ ಕೊಟ್ಟು ಕೇಳಬೇಕು. ನೇರವಾಗಿ ಎಲ್ಲವನ್ನು ಒಂದೇ ಸಲ ಕೇಳಿ ಬಿಟ್ಟರೆ ಮಂತ್ರಿಗಳು ಏನು ಸರ್ವಜ್ಞರಾ? ಮಾಧುಸ್ವಾಮಿಯವರೇ ತಾವು ಹೇಳುವುದು ನಿಜ ಇದೆ, ನೀವು ಸ್ಪೆಸಿಫಿಕ್ ಆಗಿ ನೋಟೀಸ್ ಕೊಟ್ಟು ಕೇಳಿದರೆ ಅವರು ಉತ್ತರವನ್ನು ತೆಗೆದುಕೊಂಡು ಬಂದು ಹೇಳುತ್ತಾರೆ. Please listen to me. Director or any officer cannot come and reply this. It is the Hon'ble Minister who has to replay on behalf of the Government.

Sri. J.C. Madhuswamy. But, the Minsiter is not running the Department. The Department has to answer for this question. ಇದು ಉಡುಪಿ-ಮಂಗಳೂರಿಗೆ ಸಂಬಂಧಪಟ್ಟ ಸೀಮಿತ ಪ್ರಶ್ನೆಯಾಗಿದ್ದರೆ ನಾನು ಎದ್ದು ನಿಂತು ಕೇಳುತ್ತಿರಲಿಲ್ಲ. ರಾಜ್ಯದಲ್ಲಿ ಆಹಾರಧಾನ್ಯ ಸಪ್ಲೈ ಕೊರತೆ ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯಾ ಎಂದು ಕೇಳಿದ್ದಾರೆ. ರಾಜ್ಯದಲ್ಲಿ ನಾವು ಇರುತ್ತೇವೆ. ತುಮಕೂರಿನವರು, ಚಿತ್ರದುರ್ಗದವರು ಇದ್ದಾರೆ, ನಾವು ಮಾತನಾಡಿದ್ದೇವೆ, ಬಿಲ್ಲು ಕೊಡಿ ಅಮ್ಮಾ ಎಂದು ಅವರನ್ನು ಬೇಡಿಕೊಂಡಿದ್ದೇವೆ. ಕೊರತೆಯಾಗಿರುವುದು ಗಮನಕ್ಕೆ ಬಂದಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಪ್ರಶ್ನೆ ಕೇಳಿರುವುದನ್ನು ತಾವು ಅರ್ಥ ಮಾಡಿಕೊಳ್ಳಿ. ತುಮಕೂರು ಕರ್ನಾಟಕ ರಾಜ್ಯದಲ್ಲಿ ಇಲ್ಲವೆಂದು ನಾನು ಹೇಳುತ್ತಿಲ್ಲ. You cannot expect the Minister to keep all the information of the entire state about minute details and come here and answer. By chance, you were to be a Minister tommorrow, you cannot also answer. Please remember that.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಂಗನವಾಡಿ ಕೇಂದ್ರಗಳಿಗೆ ಫುಡ್ ಇಂಟರ್‌ಪ್ಷನ್ ಆಗಿರುವುದು ತಮ್ಮ ಗಮನದಲ್ಲಿ ಇದೆಯೇ?

ಅಧ್ಯಕ್ಷರು : ಸ್ಪೆಸಿಫಿಕ್ ಕೇಸಸ್ ಇದ್ದರೆ you should bring it to the notice. Now, you have brought it to the notice. They will rectify.

ಶ್ರೀ ಡಿ.ವಿ. ಸದಾನಂದಗೌಡ : ನಾನು ಸ್ಪೆಸಿಫಿಕ್ ಆಗಿ ಒಂದು ವಿಚಾರವನ್ನು ಮಂತ್ರಿಗಳಲ್ಲಿ ಉಲ್ಲೇಖ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಈ ಹಿಂದೆ ಆಗ್ರೋ ಕಾರ್ನ್‌ಗೆ ಆಹಾರಧಾನ್ಯ ಸಪ್ಲೈ ಮಾಡುವುದಕ್ಕೆ ಆದೇಶ ಕೊಡುವುದಕ್ಕಿಂತ ಮೊದಲು ಬೇರೆ ಬೇರೆ ಜಿಲ್ಲಾ ಪಂಚಾಯಿತಿ ಏರಿಯಾದಲ್ಲಿ ಬೇರೆ ಬೇರೆಯವರು ಆಹಾರಧಾನ್ಯವನ್ನು ಅವರು ನಿಗದಿ ಮಾಡಿ ಸಪ್ಲೈ ಮಾಡುತ್ತಿದ್ದರು. ಆಗ ಎಲ್ಲಾ ಸಪ್ಲೈ ಸಮಂಜಸವಾಗಿತ್ತು. ನಾನು ಈಗ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಹಿಂದೆ ಯಾರು ಸರಿಯಾಗಿ ಸಪ್ಲೈ ಮಾಡುತ್ತಿದ್ದರು, ಅಂತವರಿಗೆ ಪುನಃ ಸಪ್ಲೈ ಮಾಡಲು ಏನಾದರೂ ಅವಕಾಶ ಒದಗಿಸಿ ಕೊಡುವ ಸಾಧ್ಯತೆ ಈ ಸರ್ಕಾರಕ್ಕೆ ಇದೆಯೇ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 6 ತಿಂಗಳ ಹಿಂದೆ ಟೋಟೋಫುಡ್ಸ್ ಎಂದು ಸಪ್ಲೈ ಮಾಡುತ್ತಿದ್ದರು. ಈಗ ಅದನ್ನು ಆಗ್ರೋ ಕಾರ್ನ್‌ಗೆ ಕೊಟ್ಟಿದ್ದಾರೆ. 6 ತಿಂಗಳಿನಿಂದ ಸಪ್ಲೈ ಇಲ್ಲಾ. ಜಿಲ್ಲಾ ಪಂಚಾಯಿತಿಯಿಂದ ರೆಝುಲ್ಯುಷನ್ ಮಾಡಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿ ಕೊಟ್ಟಿದ್ದೇವೆ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಾವ ಯಾವ ಜಿಲ್ಲಾ ಪಂಚಾಯತ್ ಏರಿಯಾದಲ್ಲಿ ಹಿಂದೆ ಸಮರ್ಪಕವಾಗಿ ಯಾರು ಆ ಆಹಾರಧಾನ್ಯವನ್ನು ವಿತರಣೆಯನ್ನು ಮಾಡುತ್ತಿದ್ದರೋ ಅವರಿಗೆ ಪುನಃ ಕೊಡುವ ಸಾಧ್ಯತೆ ಸರ್ಕಾರಕ್ಕೆ ಇದೆಯೇ?

ಅಧ್ಯಕ್ಷರು : ಮಂತ್ರಿಗಳು ಬಿಜಾಪುರ ಜಿಲ್ಲೆಯವರು ನೀವು ದಕ್ಷಿಣ ಕನ್ನಡ ಜಿಲ್ಲೆಯವರು ಈ ಭಾಷೆಯ ಸ್ವಲ್ಪ ವ್ಯತ್ಯಾಸ ಆಗುತ್ತದೆ. ನೀವು ಒಂದೇ ಸಲ ಅಷ್ಟನ್ನು ಕೇಳಿದರೆ ಅವರು ಉತ್ತರವನ್ನು ಹೇಗೆ ಹೇಳುತ್ತಾರೆ? ನೀವೇ ಉತ್ತರವನ್ನು ಹೇಳಿ.

ಶ್ರೀಮತಿ ವಿಮಲಾಬಾಯಿ ಜೆ. ದೇಶ್‌ಮುಖ್ : ಆದಷ್ಟು ಬೇಗನೆ ಈ ಎನರ್ಜಿ ಫುಡ್ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತೇನೆ.

(ಗೊಂದಲ)

ಮಾನ್ಯ ಸದಸ್ಯರು : ನ್ಯೂನ್ಯತೆ ಆಗಿದೆ ಇದಕ್ಕೆ ಬೇರೆ ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದ ಮೇಲೆ ಸದಸ್ಯರು ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ಪರವಾ ಇಲ್ಲಾ, ನಾನು ಅದನ್ನು ಮ್ಯಾನೇಜ್ ಮಾಡುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು : ಅಧ್ಯಕ್ಷರೆ, ಗುಡ್ಡಗಾಡು ಗಿರಿಜನ ಉಪಯೋಜನೆ ಅಡಿಯಲ್ಲಿ ಈ ಇಲಾಖೆಯವರು ಪ್ರತಿ ವರ್ಷ ಸುಮಾರು 30-40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ನಿರ್ದಿಷ್ಟವಾಗಿ ಇವರು ಮೈಸೂರು ಮಡಿಕೇರಿ, ಚಿಕ್ಕಮಗಳೂರನ್ನು ಆಯ್ಕೆ ಮಾಡಿಕೊಂಡಿದರುತ್ತಾರೆ. ಆದರೆ ಹೀಗೆ ಆಯ್ಕೆಮಾಡಿ ಕೊಂಡಿರುವ ಪ್ರದೇಶದಲ್ಲಿ ವಿಶೇಷ ಪೌಷ್ಠಿಕ ಆಹಾರ ವಿತರಣೆಯಾಗುತ್ತಿಲ್ಲ. ಅದನ್ನು ನಾನು ನಿರ್ದಿಷ್ಟವಾಗಿ ಆರೋಪ ಮಾಡುತ್ತಿದ್ದೇನೆ. ನನ್ನ ಕ್ಷೇತ್ರ ಗುಡ್ಡಗಾಡು ಪ್ರದೇಶದಿಂದ ತಂಬಿರುವಂಥದ್ದು, ಪರಿಶಿಷ್ಟ ಪಂಗಡದ ಜನರು ಇರುವಂಥದ್ದು, ನಾನು ಎಲ್ಲೇ ಹೋದರೂ ಈ ಇಲಾಖೆಯಿಂದ ಸರಿಯಾದ ರೀತಿಯಲ್ಲಿ ಆಹಾರಧಾನ್ಯ ವಿತರಣೆಯಾಗುತ್ತಿಲ್ಲವೆಂದು ಆರೋಪ ಮಾಡುತ್ತಿದ್ದಾರೆ. ನಾನು ದಯವಿಟ್ಟು ತಮ್ಮಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಬಸವರಾಜುರವರ ಪ್ರಶ್ನೆ ಮೈಸೂರು ಮತ್ತು ಕೆಲವು ಪ್ರದೇಶಗಳಲ್ಲಿ ವಿತರಣೆ ಮಾಡುತ್ತಿರುವುದು ಇದು ಟ್ರೈಬಲ್ ಸಪ್ಲೈಯಾ? ಗಿರಿಜನರ ಮಕ್ಕಳಿಗೆ ವಿಶೇಷವಾಗಿ ಆ ಬುಡಕಟ್ಟು ಪ್ರದೇಶದಲ್ಲಿರುವಂಥ ಮಕ್ಕಳಿಗೆ ಪೌಷ್ಠಿಕ ಆಹಾರ ಕೊಡಬೇಕೆನ್ನುವುದು ಇದೆ. ಅಲ್ಲಿ ಸರಬರಾಜು ಆಗುತ್ತಿಲ್ಲವೆನ್ನುವ ಆರೋಪ ಮಾಡುತ್ತಿದ್ದಾರೆ. ನೀವು ಚಿಕ್ಕನಾಯಕನಹಳ್ಳಿಯವರು ಮಾಧುಸ್ವಾಮಿಯವರೇ ನೀವು ಟ್ರೈಬಲ್ ಏರಿಯಾಕ್ಕೆ ಏಕೆ ಹೋಗುತ್ತೀರಿ? ನೀವು ಪ್ಲೇನ್ ಲ್ಯಾಂಡ್‌ದಲ್ಲಿರುವವರು.

ಶ್ರೀಮತಿ ವಿಮಲಾಬಾಯಿ ಜೆ. ದೇಶಮುಖ್ : ನಿರ್ದೇಶಕರಿಂದ ಮಾಹಿತಿಯನ್ನು ಆರಿಸಿ ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಆಗ್ರೋಕಾರ್ನ್ ಪ್ರೋಡಕ್ಟ್ಸ್‌ದವರು ಇಲ್ಲಿಯವೆಗೆ ಈ ಪೌಷ್ಠಿಕ ಆಹಾರಧಾನ್ಯ ಸರಬರಾಜು ಮಾಡುತ್ತಿದ್ದರು. ಅದು ಒಂದು ಸರ್ಕಾರಿ ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ಅದರ ಮೂಲಕ ಸಪ್ಲೈ ಮಾಡುತ್ತಿದ್ದರು. ಅವರು ನಿಯಮಿತವಾದಂಥ ಕಾಲದಲ್ಲಿ ಸಪ್ಲೈ ಮಾಡಲಿಕ್ಕೆ ಸಾಧ್ಯವಾಗದೇ ಇರುವುದರಿಂದ ಅದಕ್ಕೆ ಅನ್ಯ ಮಾರ್ಗಗಳನ್ನು ಕೈಗೊಳ್ಳುವ

ಸಲುವಾಗಿ ಬೇರೆ ಕ್ರಮವನ್ನು ತೆಗೆದು ಕೊಳ್ಳುವ ಸಲುವಾಗಿ ಪತ್ರಿಕೆಗಳಲ್ಲಿ ಜಾಹಿರಾತುಗಳನ್ನು ಕೊಟ್ಟಿದ್ದಾರೆ. ಅದು ಬಂದ ತಕ್ಷಣ ಗಿರಿಜನ ಉಪ ಯೋಜನೆಗೆ ಪೌಷ್ಟಿಕ ಆಹಾರಧಾನ್ಯ ಒದಗಿಸುವಂಥದ್ದಕ್ಕೆ ಕೂಡ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಿಂದೆ ಯಾರು ಸಮರ್ಪಕವಾಗಿ ಆಹಾರಧಾನ್ಯವನ್ನು ಸರಬರಾಜು ಮಾಡುತ್ತಿದ್ದರೋ ಅವರಿಗೇ ಪುನಃ ಸರಬರಾಜು ಮಾಡಲಿಕ್ಕೆ ಅವಕಾಶ ಕೊಡಬಹುದೇ?

ಅಧ್ಯಕ್ಷರು : ನೀವು 4 ಜನರು ಒಂದೇ ಸಲ ಎದ್ದು ನಿಂತು ಮಾತನಾಡುವುದರಿಂದ ಅವರು ಯಾರ ಪ್ರಶ್ನೆಗೆ ಉತ್ತರ ಹೇಳಬೇಕು?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಇದರ ಬಗ್ಗೆ ಪತ್ರಿಕೆಯಲ್ಲಿ ಜಾಹಿರಾತನ್ನು ಕೊಟ್ಟಿದ್ದಾರೆ. ಹಿಂದೆ ಯಾರು ಯಾರು ಸರಿಯಾಗಿ ಸರಬರಾಜು ಮಾಡುತ್ತಿದ್ದರು ಇದರಲ್ಲಿ ಅವರು ಅರ್ಜಿಯನ್ನು ಹಾಕಿದರೆ ಅವರಿಗೆ ಖಂಡಿತವಾಗಿ ಆದ್ಯತೆ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

11.30 ಎ.ಎಂ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೇ, ನಾನು ನೇರವಾಗಿ ಆರೋಪ ಮಾಡಿದರೂ 1996-97 ರಲ್ಲಿ ನೀವು 11 ಲಕ್ಷದ ಎರಡು ಸಾವಿರ ರೂಪಾಯಿಗಳನ್ನು ಇದಕ್ಕೋಸ್ಕರ ವೆಚ್ಚಮಾಡಿದ್ದೀರಿ. ಆದರೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ; ಅಲ್ಲಿ ಸರಿಯಾಗಿ ಸರಬರಾಜಾಗುತ್ತಿಲ್ಲ ಎಂದು. ಆದರೆ 11 ಲಕ್ಷ ರೂಪಾಯಿ ಹಣವನ್ನು ನಾವು ಯಾರಿಗೆ ಕೊಟ್ಟೆವು?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಆಗಿರುವ ವಾದವನ್ನು ಹೇಳಿದರು, ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜು : ತಾಯಂದಿರಿಗೆ ವಿಶೇಷ ಪೌಷ್ಟಿಕ ಆಹಾರ ಒದಗಿಸುವುದು, ಬರೀ ಗಿರಿಜನರಿಗೋಸ್ಕರ ಇರುವುದು.

ಅಧ್ಯಕ್ಷರು : ನಿಧಾನವಾಗಿ ಕೇಳಿ. ನೀವು ಒಂದೇ ಸಲ ಪದ್ಯ ಓದಿದ ಹಾಗೆ ಓದಿದರೆ ಹೇಗೆ? ಪ್ರಶ್ನೋತ್ತರ ಎಂದರೆ ಅದು ನಿಮ್ಮ ಬುದ್ಧಿವಂತಿಕೆಗೆ ಮತ್ತು ಅದರ ಬುದ್ಧಿವಂತಿಕೆಗೆ ಸವಾಲು. ಪತ್ರಿಕೆಯವರು ನೋಡುತ್ತಾರೆ. ಆಫೀಸರ್ಸ್ ನೋಡುತ್ತಾರೆ. ಗ್ಯಾಲರೀಸ್‌ನಲ್ಲಿ ಜನರು ಇರುತ್ತಾರೆ. ನಾಳೆ ಜನರು ಪತ್ರಿಕೆ ಓದುತ್ತಾರೆ.

ಶ್ರೀ ಹೆಚ್.ಡಿ. ಬಸವರಾಜು : ಇದರಲ್ಲಿ ಪ್ರತಿವರ್ಷ 30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ನನ್ನ ನೇರ ಆರೋಪ ಏನೆಂದರೆ, ಗಿರಿಜನರ ಉಪಯೋಗಕ್ಕೋಸ್ಕರ ಮೈಸೂರು, ಮಡಿಕೇರಿ, ಚಿಕ್ಕಮಗಳೂರನ್ನು ತಾವು ಆಯ್ಕೆ ಮಾಡಿಕೊಂಡಿದ್ದೀರಿ. ಈಗಾಗಲೇ ಇದರಲ್ಲಿ 11 ಲಕ್ಷ ರೂಪಾಯಿಗಳನ್ನು ಈ ಸಾಲಿನಲ್ಲಿ ಖರ್ಚು ಮಾಡಿದ್ದೀರಿ. ನನ್ನ ಆರೋಪ ಏನೆಂದರೆ, 11 ಲಕ್ಷ ರೂಪಾಯಿ ಖರ್ಚು ಮಾಡಿದರೂ ಅವರಿಗೆ ಯಾವುದೇ ವಿಧವಾದ ಪೌಷ್ಟಿಕ ಆಹಾರ ಸಿಕ್ಕಿಲ್ಲ.

ಅಧ್ಯಕ್ಷರು : ವಿಚಾರಣೆ ಮಾಡಿ ತನಿಖೆ ನಡೆಸಿದರೆ ಆಯಿತು.

ಶ್ರೀ ಎಂ.ಪಿ. ಪ್ರಕಾಶ್ : ನಿಯತಕಾಲಿಕವಾಗಿ ಅವರು ಅದನ್ನು ಪೂರೈಸುವುದರಲ್ಲಿ ವಿಫಲರಾಗಿದ್ದಾರೆ ಎನ್ನುವ ಕಾರಣಕ್ಕಾಗಿ ಮಾನ್ಯ ಸಚಿವರು ಆ ವಿಚಾರವನ್ನು ಪ್ರಸ್ತಾಪ ಮಾಡಿ ಹೇಳಿದ್ದಾರೆ. ನಿಯತಕಾಲಿಕವಾಗಿ ಆಗಿರುವುದು. 11 ಲಕ್ಷ ರೂಪಾಯಿಗಳನ್ನು ಕೊಟ್ಟಿರುವ ಸಂದರ್ಭವಾದಾಗ್ಯೂ ಕೂಡ ಪೌಷ್ಟಿಕ ಆಹಾರಾಂಶಗಳು ಸರಬರಾಜಾಗಿಲ್ಲ ಎನ್ನುವುದಾದರೆ ಖಂಡಿತವಾಗಿಯೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಅತಿವೃಷ್ಟಿಗೊಳಗಾದವರಿಗೆ ಪರಿಹಾರ.

300 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷದ ಮಳೆಗಾಲದಲ್ಲಿ ರಾಜ್ಯದಲ್ಲಿ ಬಂದಂತಹ ಮಳೆ, ನೆರೆಯಿಂದಾಗಿ ಸಂಭವಿಸಿದ ಕೃಷಿ ಹಾನಿ ಎಷ್ಟು?

ಆ) ರಾಜ್ಯದಲ್ಲಿ ಒಟ್ಟು ಎಷ್ಟು ಎಕರೆ ಕೃಷಿ ನಾಶವಾಗಿರುತ್ತದೆ? (ಜಿಲ್ಲಾವಾರು ವಿವರ ನೀಡುವುದು)

ಇ) ಇವುಗಳಲ್ಲಿ ಎಷ್ಟು ಸಂತ್ರಸ್ಥ ಕುಟುಂಬಗಳಿಗೆ ಪರಿಹಾರವನ್ನು ನೀಡಲಾಗಿದೆ?

ಈ) ಕೃಷಿ ಹಾನಿಗೊಳಗಾದವರಿಗೆ ನೀಡಲಾಗುತ್ತಿರುವ ಪರಿಹಾರ ಧನವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ರಮೇಶ್.ಸಿ. ಜಿಗಿಜಿಣಗಿ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಈ ವರ್ಷದ ಮಳೆಗಾಲದಲ್ಲಿ ಮಳೆ, ನೆರೆಯಿಂದಾಗಿ ಸಂಭವಿಸಿದ ಕೃಷಿ ಹಾನಿ ರೂ.172.66 ಲಕ್ಷಗಳಾಗಿವೆ.

ಆ) ರಾಜ್ಯದಲ್ಲಿ ಒಟ್ಟು 7782:20 ಎಕರೆ ಕೃಷಿಬೆಳೆ ನಾಶವಾಗಿರುತ್ತದೆ? ಜಿಲ್ಲಾವಾರು ವಿವರ ಕೆಳಕಂಡಂತಿದೆ-

1.	ದಕ್ಷಿಣ ಕನ್ನಡ	:	6257.28 ಎಕರೆಗಳು
2.	ಚಿಕ್ಕಮಗಳೂರು	:	40.00 ಎಕರೆಗಳು
3.	ಗುಲ್ಬರ್ಗಾ	:	104.00 ಎಕರೆಗಳು
4.	ಶಿವಮೊಗ್ಗ	:	1364.00 ಎಕರೆಗಳು
5.	ಉತ್ತರ ಕನ್ನಡ	:	16.32 ಎಕರೆಗಳು
	ಒಟ್ಟು	:	**7782.20 ಎಕರೆಗಳು**